ಕಸ್ತೂರಿರಂಗನ್ ವರದಿಯನ್ನು ಜಾರಿಗೊಳಿಸುವ ಕುರಿತು ಕರ್ನಾಟಕವೂ ಸೇರಿದಂತೆ ಪಶ್ಚಿಮ ಘಟ್ಟಗಳ ಕೃಪೆಯಲ್ಲಿರುವ ಎಲ್ಲ ರಾಜ್ಯಗಳು ಚೌಕಾಸಿ ನಡೆಸುತ್ತಿವೆ, ನಕಾರಾತ್ಮಕ ಧೋರಣೆ ಅನುಸರಿಸುತ್ತಿವೆ. ಕಾಡನ್ನು ಅವಲಂಬಿಸಿದ ಜನರ ಜೀವನೋಪಾಯಕ್ಕೆ ಧಕ್ಕೆಯುಂಟಾಗುತ್ತದೆ ಎನ್ನುವುದು ವರದಿ ಜಾರಿಗೆ ಹಿಂಜರಿಯುತ್ತಿರುವುದಕ್ಕೆ ನೀಡಲಾಗುತ್ತಿರುವ ಕಾರಣ. ಆದರೆ, ಕಾಡಿನಮಕ್ಕಳ ಬದುಕಿಗಿಂತಲೂ ಕಾಡನ್ನೂ ನಾಡನ್ನೂ ಬೆಸೆಯುವ ಅಭಿವೃದ್ಧಿ ಚಟುವಟಿಕೆಗಳೇ ವರದಿ ಜಾರಿಯ ನನೆಗುದಿಗೆ ಕಾರಣವಾದಂತಿದೆ. ಬರ, ಅತಿವೃಷ್ಟಿ, ಅಕಾಲಿಕ ಮಳೆ, ಹೆಚ್ಚುತ್ತಿರುವ ಭೂಮಿಯ ಜ್ವರ ಸೇರಿದಂತೆ, ಪ್ರಕೃತಿಯ ಆರೋಗ್ಯ ತುರ್ತು ನಿಗಾ ಘಟಕದ ದಾರಿಯಲ್ಲಿರುವ ಸೂಚನೆಗಳು ಕಣ್ಣಮುಂದೆ ನಿಚ್ಚಳವಾಗಿದ್ದರೂ ನಾವು ಮಾತ್ರ ಕ್ಷಣಿಕದ ಲಾಭಗಳ ಹಂಗಿಗೆ ಬಿದ್ದು ತಲೆಮಾರುಗಳ ಭವಿಷ್ಯದ ಬೆಳಕಿನ ಸೊಡರನ್ನು ಬಿರುಗಾಳಿಗೆ ಒಡ್ಡುತ್ತಿದ್ದೇವೆ. ಪರಿಸರ ಸಂರಕ್ಷಣೆಗೆ ಅಗತ್ಯವಾದುದು ರೈತಪ್ರಜ್ಞೆಯೇ ಹೊರತು ವ್ಯಾಪಾರಿ ಪ್ರಜ್ಞೆಯಲ್ಲ ಎನ್ನುವ ಅರಿವು ಎಲ್ಲರದಾಗಬೇಕಾಗಿದೆ. ಈ ನಿಟ್ಟಿನಲ್ಲಿ ಪಶ್ಚಿಮ ಘಟ್ಟಗಳ ಸಂರಕ್ಷಣೆಗೆ ಸಂಬಂಧಿಸಿದ ಸಂಗತಿಗಳ ವಿಶ್ಲೇಷಣೆ ಹಾಗೂ ಗಾಡ್ಗೀಳ್ – ಕಸ್ತೂರಿರಂಗನ್ ವರದಿಗಳ ಮುಖ್ಯಾಂಶಗಳು.

■ **ಕೋಡಿಬೆಟ್ಟು ರಾಜಲಕ್ಷ್ಮಿ**



ಪಶ್ಚಿಮಘಟ್ಟದ ಪದಕರೂಪಿ
ಶಿಖರ ಕೊಡಚಾದ್ರಿಯ
ಒಂದು ಚಂದದ ನೋಟ
ಚಿತ್ರ: ಮಂಜುನಾಥ ಭಟ್